ವಿಜಯವಾಣಿ
ಕನ್ನಡಿಗರ ಧ್ವನಿ

**Monday 05th August 2024**

# RVCE Convocation Ceremony 2024

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಸಾಧನೆಗಿರುವ ಅವಕಾಶ ಬಳಸಿಕೊಳ್ಳಿ

## ಎಂ.ಆರ್. ಜೈಶಂಕರ್ ಸಲಹೆ | ಆರ್.ವಿ. ಕಾಲೇಜಿನಲ್ಲಿ ಘಟಿಕೋತ್ಸವ




ವಿಜಯವಾಣಿ ಚಿತ್ರ

**ಮೈಸೂರು ಮುಖ್ಯರಸ್ತೆಯ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ಹಮ್ಮಿಕೊಂಡಿದ್ದ ಆರ್.ವಿ. ಕಾಲೇಜಿನ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಬ್ರಿಗೇಡ್ ಗ್ರೂಪ್‌ನ ಕಾರ್ಯಾಧ್ಯಕ್ಷ ಎಂ.ಆರ್. ಜೈಶಂಕರ್, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ. ಎಂ.ಪಿ. ಶ್ಯಾಮ್, ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಹ್ಮಣ್ಯ ಇತರರಿದ್ದರು.**

**ಯಶವಂತಪುರ:** ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ತಾಂತ್ರಿಕ ಹಾಗೂ ವೈಜ್ಞಾನಿಕ ಹೊಸ ಆವಿಷ್ಕಾರಗಳ ಹಿಂದೆ ಇಂಜಿನಿಯರ್‌ಗಳ ಪಾತ್ರ ಮಹತ್ವದ್ದು ಎಂದು ಬ್ರಿಗೇಡ್ ಗ್ರೂಪ್ ಕಾರ್ಯಾಧ್ಯಕ್ಷ ಎಂ.ಆರ್. ಜೈಶಂಕರ್ ಹೇಳಿದ್ದಾರೆ.

ಮೈಸೂರು ಮುಖ್ಯರಸ್ತೆಯ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ಹಮ್ಮಿಕೊಂಡಿದ್ದ ಆರ್.ವಿ. ತಾಂತ್ರಿಕ ಕಾಲೇಜಿನ 14ನೇ ಘಟಿಕೋತ್ಸವದಲ್ಲಿ ಮಾತನಾಡಿದರು.

ಇಂದಿನ ಯುವಪೀಳಿಗೆ ಪ್ರಾದೇಶಿಕ ಸವಾಲುಗಳಿಗಿಂತ ಜಾಗತಿಕ ಸವಾಲುಗಳನ್ನು ಎದುರಿಸಬೇಕು. ದೇಶದಲ್ಲಿ ಸಾಧನೆ ಮಾಡಲು ಹೇರಳ ಅವಕಾಶಗಳಿದ್ದು, ಅವುಗಳನ್ನು ಬಳಸಿಕೊಳ್ಳುವ ಮನೋಭಾವ ರೂಢಿಸಿಕೊಳ್ಳಬೇಕು. ತಮಗೆ ಸಹಜ ಸಾಮರ್ಥ್ಯವಿರುವ ವಿಷಯದ ಬಗ್ಗೆ ಹೆಚ್ಚು ಗಮನಹರಿಸುವ ಮೂಲಕ ಶ್ರಮವಹಿಸಿ ದುಡಿದರೆ ಸಮಾಜದಲ್ಲಿ ಉನ್ನತ ಸ್ಥಾನಕ್ಕೇರಬಹುದು ಎಂದು ತಿಳಿಸಿದರು. 12 ಚಿನ್ನ ಪದಕ, 12 ಬೆಳ್ಳಿ ಪದಕ ಪ್ರದಾನ ಮಾಡಲಾಯಿತು. 1,140 ಪದವಿ ಪ್ರಮಾಣಪತ್ರ ವಿತರಿಸಲಾಯಿತು. ಪ್ರಾಂಶುಪಾಲ ಡಾ. ಕೆ.ಎನ್. ಸುಬ್ರಹ್ಮಣ್ಯ, ಉಪ ಪ್ರಾಂಶುಪಾಲೆ ಡಾ. ಕೆ.ಎಸ್. ಗೀತಾ, ಆರ್‌ಎಸ್‌ಎಸ್‌ಟಿ ಉಪಾಧ್ಯಕ್ಷ ಡಾ. ಎ.ಸಿ. ಚಂದ್ರಶೇಖರರಾಜು, ಗೌರವ ಕಾರ್ಯದರ್ಶಿ ಡಾ. ಎ.ವಿ.ಎಸ್. ಮೂರ್ತಿ, ಜಂಟಿ ಕಾರ್ಯದರ್ಶಿ ಡಿ.ಪಿ. ನಾಗರಾಜ್, ಖಜಾಂಚಿ ಪಿ.ಎಸ್. ವೆಂಕಟೇಶ್ ಇತರರಿದ್ದರು.

> **ಸಮಾಜದಿಂದ ಉಪಕೃತರಾದ ನಾವು ಮರಳಿ ಸೇವೆ ಸಲ್ಲಿಸದೆ ಹೋದರೆ ವ್ಯಕ್ತಿತ್ವಕ್ಕೆ ಘನತೆ ಇರುವುದಿಲ್ಲ. ಹಾಗೆಯೇ ನಾವು ಕಲಿತ ಸಂಸ್ಥೆಯ ಬಗ್ಗೆ ಉತ್ತಮ ವಿಷಯಗಳನ್ನು ಪಸರಿಸಬೇಕು.**
>
> | ಡಾ. ಎಂ.ಪಿ. ಶ್ಯಾಮ್
> ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ

Bengaluru Edition Edition
Aug 05, 2024 Page No. 7
Powered by: